# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 03/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಬೈರಾರೆಡ್ಡಿ | ಪ್ರಾಸಾಃ | 13 |
| **ತಂದೆಯ ಹೆಸರುಃ** | ವೆಂಕಟೇಶಪ್ಪ | ಚಾಸಾಃ | 15 |
| **ವಯಸ್ಸುಃ** | 58 | ಪ್ರಮಾಣ ವಚನ ಭೋದಿಸಿದ ದಿನಾಂಕ | 23.07.2025 |
| **ಉದ್ಯೋಗಃ** | ಟಿಸಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ದಿ.*05.10.2022* ರಂದು ನಾನು ನಮ್ಮ ಇಲಾಖಾ ವಾಹನದ ಬಾಬ್ತು ಪೋಲಿಸ್ ಠಾಣೆಗೆ ಹೋಗಿದ್ದೆ. ಅಲ್ಲಿ *1* ಮತ್ತು *2* ನೇ ಆರೋಪಿತರ ಹೆಸರನ್ನು ಹೇಳಿ ಪೋಲಿಸರು ಇಬ್ಬರು ವ್ಯಕ್ತಿಗಳನ್ನು ತೋರಿಸಿದ್ದರು. ನಂತರ ಅವರನ್ನು ಹಾಗೂ ನನ್ನನ್ನು ಪೋಲಿಸರು ಜೀಪಿನಲ್ಲಿ ಆಶ್ರಯ ಬಡಾವಣೆ ಕಡೆ ಕರೆದುಕೊಂಡು ಹೋಗಿದ್ದು ಅಲ್ಲಿ *1* ನೇ ಆರೋಪಿ ಒಂದು ಹಾಲಿನ ವಾಹನವನ್ನು ತೋರಿಸಿದ. ನಂತರ ಆತ ಚಾಲಕನ ಸೀಟ್‌ನ ಅಡಿಯಿಂದ ಒದು ಚಾಕುವನ್ನು ತೆಗೆದು ಅದರಿಂದ ಕೊಲೆ ಮಾಡಿದ್ದಾಗಿ ಹೇಳಿದ ಮೇರೆಗೆ ಸ್ಥಳದಲ್ಲಿ ಮಹಜರ್ ಜರುಗಿಸಿದ್ದು ನನ್ನ ಸಮಕ್ಷಮ ಚಾಕು, ಹಾಲಿನ ವಾಹನ ಹಾಗೂ ರಕ್ತದ ಮಾದರಿ ಹತ್ತಿಯಿಂದ ಅಮಾನತುಪಡಿಸಿಕೊಂಡರು. ಸದರಿ ಚಾಕು ಈಗ ನೋಡುತ್ತಿದ್ದು ಮು.ಮಾ.*17* ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಮಹಜರ್ ನಿಪಿ-*30* ಆಗಿದ್ದು, *30(ಬಿ)* ನನ್ನ ಸಹಿ. ಆ

ಸಮಯದಲ್ಲಿ ನಿಪಿ*31* ರಿಂದ ನಿಪಿ-*34* ಫೋಟೋ ತೆಗೆದಿದ್ದು ಅದರಲ್ಲಿ ವಾಹನ ಕೂಡ ಇದೆ. ರಕ್ತದ ಮಾದರಿ ತೆಗೆದ ಹತ್ತಿ ನೋಡುತ್ತಿದ್ದು ಅದನ್ನು ಮು.ಮಾ.*18* ಎಂದು ಗುರುತಿಸಲಾಯಿತು. ಚಾಸಾ-*14* ಕೂಡ ಹಾಜರಿದ್ದು ನನ್ನೊಂದಿಗೆ  ಸಹಿ ಮಾಡಿದ್ದರು.

**<u>ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿ ಪರ ಶ್ರೀ.ಆರ್.ಸಿ.ಎಸ್.ವಕೀಲರಿಂದ ಪಾಟೀ ಸವಾಲು</u>**

ನಾನು ಠಾಣೆಗೆ ಹೋದಾಗ ಮಧ್ಯಾಹ್ನ 02.00 ಗಂಟೆ ಆಗಿತ್ತು. ಸುಮಾರು ಅರ್ಧ ಗಂಟೆ ಇದ್ದೆ. ಮು.ಮಾ.17 ನ್ನೆ ನನ್ನ ಸಮಕ್ಷಮ ಅಮಾನತುಪಡಿಸಿಕ್ಕೊಲಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ, ಠಾಣೆಯಲ್ಲಿ ಸಹಿ ಮಾಡಿ ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ.

**<u>ಪಾಟೀ ಸವಾಲುಃ 6 ನೇ ಆರೋಪಿ ಪರ ಶ್ರೀ.ಎನ್.ವಿ.ಆರ್. ವಕೀಲರಿಂದ ಪಾಟೀ ಸವಾಲು</u>**

ನಾನು ಮು.ಮಾ.17 ರ ಮೇಲೆ ಪ್ರತ್ಯೇಕ ಗುರುತು ಇಟ್ಟುಕೊಂಡಿರಲಿಲ್ಲ. ಅದು ರಕ್ತದ ಕಲೆ ಆಅಗಿತ್ತು ಎಂದು ಸ್ವತಃ ಹೇಳುತ್ತಾರೆ. ನಾನು ಠಾಣೆಗೆ ಹೋಗುವ ವಿಚಾರ ಎಲ್ಲೂ ದಾಖಲಿಸಿಲ್ಲ. ಸಹಪಾಠಿಗೆ ಹೇಳಿ ಹೋಗಿದ್ದೇನು. ಅಪಘಾತ ವಾಗಿದ್ದ ನಮ್ಮ ಬಸ್ ನ ನಂ. ನೆನಪಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಮು.ಮಾ.17 ಅಮಾನತುಪಡಿಸಿಕೊಂಡಿಲ್ಲ, ಠಾಣೆಯಲ್ಲಿ ಸಹಿ ಮಾಡಿ ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>5 ನೇ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದಾರೆ.</u>**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

**(ಕೆ.ಎಂ.ರಾಜಶೇಖರ)**

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

ದಿಃ 23.07.2025
ಸ್ಥಳಃ ಚಿಂತಾಮಣಿ